ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 68-71
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS

editor@srujani.in

# ಭಕ್ತಿ, ಕಾಯಕ, ದಾಸೋಹ: ವಚನ ಸಾಹಿತ್ಯದ ಧಾರ್ಮಿಕ ಆಯಾಮಗಳು

**ಡಾ. ಬಿ.ಎಸ್. ಗಂಗನಳ್ಳಿ**
ಮುಖ್ಯಸ್ಥರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬೆಳಗಾವಿ.

***Abstract:***

*ಕರ್ನಾಟಕದಲ್ಲಿ ಬಸವಾದಿ ಶರಣರು ಉದಯಿಸಿದ ಕಾಲದಲ್ಲಿ ಪ್ರಚಲಿತವಿದ್ದ ಧಾರ್ಮಿಕ ಪರಿಸರ ಕುಲಷಿತವಾಗಿತ್ತು. ಅಂದಿನ ಸಮಾಜದಲ್ಲಿ ಹಳೆಯ ಕಾಲದ ಪದ್ಧತಿಗಳು, ದುರಾಚಾರಗಳು, ವಾಮಾಚಾರಗಳು ಕುರುಡು ನಂಬಿಕೆಗಳು, ಶುಷ್ಕ ಸಿದ್ಧಾಂತಗಳು ಅರ್ಥವಿಲ್ಲದ ವಾದ ಪ್ರತಿವಾದಗಳಲ್ಲಿ ಜಾತಿ ಮತ್ತು ದ್ವೇಷ ತಲೆ ಹಾಕಿದ್ದವು. ಒಂದುಕಡೆ ಶಂಕರಾಚಾರ್ಯರ ಅದ್ವೈತದ ಪ್ರಚಾರ, ಇನ್ನೊಂದೆಡೆ ಮದ್ವಾಚಾರ್ಯರ ದ್ವೈತದ ಪ್ರಚಾರ ಮಗದೊಂದೆಡೆ ಶಿವಧರ್ಮದ ಇರುಸು ಮುರುಸು ಇದ್ದಿತು, ಜಟಿಲವಾದ ಹಾಗೂ ಕಠಿಣವಾದ ಈ ಧರ್ಮದ ತತ್ವಗಳಿಂದ ಮತ್ತು ಆಚರಣೆಗಳಿಂದ ಬೇಸರಗೊಂಡ ಜನ ಹೊಚ್ಚ ಹೊಸ ಹಾಗೂ ಸ್ವಚ್ಛ ಸರಳ ಧಾರ್ಮಿಕ ವಾತಾವರಣಕ್ಕಾಗಿ ಕಾತುರದಿಂದ ಕಾಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಹೊಸ ನಂಬಿಕೆ, ಆದರ್ಶ ಆಲೋಚನೆಗಳಿಂದ ಕೂಡಿದ ಬಸವಾದಿ ಶರಣರ ಧಾರ್ಮಿಕ, ಸಾಮಾಜಿಕ ಆಂದೋಲನವು ಹೊಸ ಆಯಾಮಗಳಿಗೆ ಅನುವು ಮಾಡಿಕೊಟ್ಟಿತು.*

***Keywords:*** *ವಚನ ಸಾಹಿತ್ಯ, ಕಾಯಕ, ದಾಸೋಹ, ಪಂಚಾಚಾರ, ಧಾರ್ಮಿಕ ಆಯಾಮ.*

**ಪೀಠಿಕೆ**

ಯಾವುದೇ ಧರ್ಮ ತತ್ವಗಳು ಸಾಧಕರಿಗೆ ಕಠಿಣವೆನಿಸಿದರೆ ಅವು ಆಚರಣೆಯಲ್ಲಿ ಬರಲಾರವು. ಒಂದು ವೇಳೆ ಬಂದರೂ ಅವು ತಮ್ಮ ಸತ್ವವನ್ನು ಕಳೆದುಕೊಳ್ಳುವವು ಎನ್ನುವುದನ್ನು ಮನಗಂಡ ಶರಣರು ಸರಳ ಸುಂದರವಾದ ಜನಸಾಮಾನ್ಯರು, ಪಾಮರರಿರೂ ಆಚರಿಸಬಹುದಾದ ವಿನೂತನವಾದ ತತ್ವಗಳನ್ನು ಬೆಳಕಿಗೆ ತಂದರು. ಗುರು–ಲಿಂಗ–ಜಂಗಮ, ಭಕ್ತಿ–ಕಾಯಕ–ದಾಸೋಹ, ಪಂಚಾಚಾರ, ಷಟಸ್ಥಲ, ಅಷ್ಟಾವರಣ, ಇಷ್ಟಲಿಂಗ ಪೂಜೆ, ಶಿವಯೋಗ ಮುಂತಾದ ಧಾರ್ಮಿಕ ತತ್ವಗಳನ್ನು ಅರಿತು ಅಳವಡಿಸಿಕೊಳ್ಳುವುದರ ಮೂಲಕ ಸತ್ಯ, ಅಹಿಂಸೆ, ಸಹನೆ, ಅರಿವು, ಅನುಭಾವ, ದೇವರು, ಧರ್ಮ, ಪಾಪ–ಪುಣ್ಯ, ಸ್ವರ್ಗ–ನರಕ ಮುಂತಾದ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದನ್ನು ಕಾಣುತ್ತೇವೆ.

ಭಕ್ತನಾದವನು ಯೋಗ್ಯ ಗುರುವಿನಿಂದ ಲಿಂಗದೀಕ್ಷೆ ಹೊಂದಿ ಸತ್ಯ ಶುದ್ಧ ನಡೆ–ನುಡಿ–ಆಚಾರಗಳಿಂದ, ಗುರು–ಲಿಂಗ, ಜಂಗಮ, ಪೂಜೆ ಸೇವೆಯಲ್ಲಿ ನಿರತನಾಗಬೇಕು ಹಾಗೂ ಇವುಗಳಲ್ಲಿ ನಿಷ್ಠೆಯುಳ್ಳವನಾಗಿರಬೇಕು. ಇಷ್ಟಲಿಂಗದಲ್ಲಿ ಪ್ರಾಣವುಳ್ಳವನಾಗಿ, ಕಾಯಕ–ದಾಸೋಹದಲ್ಲಿ ತೊಡಗಿದವನಾಗಿರಬೇಕು. ತ್ರಿಕರಣ ಶುದ್ಧಿಯಿಂದ ತನು–ಮನ–ಧನಗಳನ್ನು ಗುರು–ಲಿಂಗ–ಜಂಗಮರಿಗೆ ಸಮರ್ಪಣೆ ಮಾಡಿಕೊಂಡು, ಆತ್ಮೋನ್ನತಿಯ ಕಡೆ

***Please cite this article as:*** ಗಂಗನಳ್ಳಿ ಬಿ.ಎಸ್. (2023). ಭಕ್ತಿ, ಕಾಯಕ, ದಾಸೋಹ: ವಚನ ಸಾಹಿತ್ಯದ ಧಾರ್ಮಿಕ ಆಯಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 68–71.

ಸಾಗುವವನೇ ಭಕ್ತನೆನಿಸಿಕೊಳ್ಳುವನು. ಗಣಾಚಾರ, ಭೃತ್ಯಾಚಾರ, ಲಿಂಗಾಚಾರ, ಸದಾಚಾರ, ಶಿವಾಚಾರಗಳೆಂಬ ಪಂಚಾಚಾರಗಳ ಮೂಲಕ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳನ್ನು ಅಳವಡಿಸಿಕೊಂಡು, ಗುರು–ಲಿಂಗ–ಜಂಗಮ ಪಾದೋದಕ ಪ್ರಸಾದ, ವಿಭೂತಿ, ರುದ್ರಾಕ್ಷಿ ಮಂತ್ರಗಳೆಂಬ ಅಷ್ಟಾವರಣಗಳ ಅನುಸರಣೆಯಿಂದ ಭಕ್ತನು ಶರಣನಾಗಿ ಐಕ್ಯ ಸ್ಥಲದಲ್ಲಿ ಲಿಂಗವೇ ತಾನಾಗಿ, ಜೀವನೇ ದೇವನಾಗುವ ಸ್ಥಿತಿಯನ್ನು ತಲುಪುವನು. ಮಾನವ ಮಹಾದೇವನಾಗುವ ಮಹೋನ್ನತಿಯನ್ನು ವಚನಕಾರರು ಅರುಹಿದ್ದಾರೆ.

ಮೃತ್ಯುಲೋಕವೇ ಶರಣರಿಗೆ ಕರ್ತಾರನ ಕಮ್ಮಟವಾಯಿತು, ಸ್ವರ್ಗ, ನರಕಗಳ ಅಲ್ಲಿ, ಇಲ್ಲಿ ಎಂಬ ಉಭವಳಿಸಿ, ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದರೆ ನರಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಶರಣರ ಈ ನುಡಿಗಳೇ ನಮ್ಮ ನಡೆ–ನುಡಿ, ಆಚಾರ–ವಿಚಾರಗಳಲ್ಲಿ ನಾವು ಮಾಡುವ ಕಾರ್ಯಗಳಲ್ಲಿದೆ ಎಂಬುದನ್ನು ತೋರಿವೆ. ಪಾಪ–ಪುಣ್ಯ, ಸುಖ–ದುಃಖಗಳು, ವಾರ, ತಿಥಿ ನಕ್ಷತ್ರಗಳು ಮುಹೂರ್ತ, ವಿಚಾರಗಳಲ್ಲಿ ವಚನಕಾರರು ವೈಜ್ಞಾನಿಕ ಮತ್ತು ವೈಚಾರಿಕ ನಿಲುವು ತಾಳಿದ್ದಾರೆ. ದೇವರು, ಧರ್ಮ, ದೇವಾಲಯಗಳು, ಮುಹೂರ್ತ ವಿಚಾರಗಳಲ್ಲಿ ವಚನಾಕಾರರು ವೈಜ್ಞಾನಿಕ ನಿಲುವು ತಾಳಿದ್ದಾರೆ. ದೇವರು, ಧರ್ಮ, ದೇವಾಲಯಗಳ ಹೆಸರಿನಲ್ಲಿ ನಡೆಯುವ ಅಂಧಾನುಚರಣೆ, ಮೌಢ್ಯಗಳನ್ನು ನಿರಾಕರಿಸಿ "ದೇಹವೇ ದೇವಾಲಯ, ದೇವನೊಬ್ಬ ನಾಮ ಹಲವು, ಎಂಬುವುಗಳನ್ನು ಜಗದಗಲ ಮುಗಿಲಗಲ, ಮಿಗೆಯಗಲ, ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ...... ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ, ದಯವಿಲ್ಲದ ಧರ್ಮವವೇವುದಯ್ಯ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ಧಯವೇ ಧರ್ಮದ ಮೂಲವಯ್ಯಾ" ಮುಂತಾದ ವಿಚಾರಗಳು ಧಾರ್ಮಿಕ ವಲಯದಲ್ಲಿನ ಹೊಸ ಆಯಾಮಗಳಾಗಿವೆ.

ಶರಣರು ಜನನ ಮರಣಗಳೆಂಬ ಚಿಂತೆಗೊಳಗಾದವರಲ್ಲ 'ಮರಣವೇ ಮಹಾನವಮಿ' ಹುಟ್ಟುವ ಜೀವಿ ಸಾಯಲೇಬೇಕೆಂಬ ನಿಖರತೆ, ನಿಶ್ಚಿತತೆಯನ್ನು ಅರ್ಥೈಸಿಕೊಂಡು, ಹುಟ್ಟು ಸಾವುಗಳ ನಡುವಿನ ವಾಸ್ತವದ ಬದುಕಿಗೆ ಮಹತ್ವ ನೀಡಿದವರು ಶರಣರು, ಸತ್ಯದ ಕುರಿತು "ಸಜ್ಜನರ ಸಂಗವ ಮಾಡೂದು ದೂರ ದುರ್ಜನರ ಸಂಗ ಬೇಡವಯ್ಯ ಅಂತರಂಗ ಶುದ್ಧವಿಲ್ಲದವರ ಸಂಗವು ಸಿಂಗಿಕಾಳ ಕೂಟ ವಿಷವು" ಎನ್ನುವ ಶರಣರು ಅಂತರಂಗ ಶುದ್ಧಿ ಬಹಿರಂಗ ಶುದ್ಧಿಗೆ ಶರಣರ, ಸಜ್ಜನರ ಸಂಗ ಮುಖ್ಯವೆಂದಿದ್ದಾರೆ.

ಸ್ತ್ರೀಯರು, ಅಸ್ಪೃಶ್ಯರು, ದೀನದಲಿತರು, ಹಾಗೂ ಕೆಳವರ್ಗದವರನ್ನು ಧಾರ್ಮಿಕ ವಲಯದಿಂದ ಹೊರಗಿಟ್ಟು ಕೀಳಾಗಿ ಕಾಣಲಾಗುತ್ತಿತ್ತು. ವಚನಕಾರರು ಅಂತವರಿಗೂ ಧಾರ್ಮಿಕ ಚರ್ಚೆಗಳಲ್ಲಿ, ಧರ್ಮ ಚಿಂತನೆಗಳಲ್ಲಿ ಅವಕಾಶ ಮಾಡಿಕೊಟ್ಟು ಅನುಭವ ಮಂಟಪವೆಂಬ ಸಮಾನ ವೇದಿಕೆಯಲ್ಲಿ ಮುಂಚೂಣಿಯಲ್ಲಿ ತಂದು ನಿಲ್ಲಿಸುವ ಶರಣರ ಈ ನೋಟ ದೃಷ್ಟಿಕೋನ ಹೊಸತಾಗಿದೆ. ವಚನಕಾರರು, ಸಂಸಾರವನ್ನು ಬೆನ್ನಿಗೆ ಕಟ್ಟಿಕೊಂಡೇ ಅಧ್ಯಾತ್ಮದತ್ತ ಮುಖ ಮಾಡಿದವರು, ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎನ್ನುತ್ತಾ ಕಾಯಕ, ದಾಸೋಹದಲ್ಲಿ ತೊಡಗಿದವರು. ಆಯ್ದಕ್ಕಿ ಲಕ್ಕಮ್ಮ, ಮಾರಯ್ಯ, ಹಡಪದ ಲಿಂಗಮ್ಮ, ಅಪ್ಪಣ್ಣ, ಗಂಗಾಬಿಕೆ, ನೀಲಾಂಬಿಕೆ, ಮೋಳಿಗೆ ಮಾರಯ್ಯ, ಮಹಾದೇವಿ ಮುಂತಾದವರು ಇಂಥ ಅನೇಕ ಶರಣ ದಂಪತಿಗಳನ್ನು ಕಾಣುತ್ತೇವೆ.

ವೇದ, ಶಾಸ್ತ್ರ, ಪುರಾಣಗಳಲ್ಲಿನ ಮೌಢ್ಯಗಳನ್ನು ದಿಕ್ಕರಿಸಿ, ಸಾರಾಸಗಟವಾಗಿ ಅವುಗಳನ್ನು ಅಲ್ಲಗಳೆದರು. "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕುವೆ, ತರ್ಕದ ಬೆನ್ನಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ" ಎಂಬ ನೈಜ

ಜೀವನಾನುಭವಗಳೇ ವಚನಗಳು, ವಚನಗಳೇ ಶರಣರ ಉಪನಿಷತ್ತುಗಳಾಗಿವೆ.

'ಕಾಯಕ ಮತ್ತು ದಾಸೋಹ' ಶರಣರು ವಿಚಾರ ಪ್ರಪಂಚಕ್ಕೆ ಕೊಟ್ಟ ಮಹತ್ವ ಪೂರ್ಣ ಕಾಣಿಕೆಯಾಗಿವೆ. ಶರಣರು ತಂದ ಕಾಯಕದ ಆದರ್ಶ ಮತ್ತು ಅರ್ಥವ್ಯಾಪ್ತಿ ಇಡೀ ವಿಶ್ವವನ್ನೆ ಒಳಗೊಳ್ಳುವಂತಿದ್ದು. ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಕಾಯಕವೆಂದರೆ, ಕಾಯವನ್ನು ದುಡಿಸಿ ಮಾಡುವ ಕೆಲಸ. ಪ್ರತಿಯೊಬ್ಬ ವ್ಯಕ್ತಿಯೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಬೇಕು. ದುಡಿಯದವನಿಗೆ ಇನ್ನೊಬ್ಬರು ಶ್ರಮಪಟ್ಟ ದುಡಿದುವರಲ್ಲಿ ಕುಳಿತು ತಿನ್ನುವ ಹಕ್ಕು ಇಲ್ಲ. ಎಲ್ಲ ವಚನಕಾರರು ಒಂದೊಂದು ಕಾಯಕವನ್ನು ಮಾಡಿಕೊಂಡು ದಾಸೋಹದಲ್ಲಿ ತೊಡಗಿದವರು. ಬಿಜ್ಜಳನಲ್ಲಿ ಮಂತ್ರಿಯಾಗಿ ದುಡಿದ ಬಸವಣ್ಣನವರು "ಸಲೇ ಕೈಕೂಲಿ ಮಾಡಿಯಾದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ. ಎನ್ನ ಒಡಲವಸರಕ್ಕೆ ಕುದಿದೆನಾದೊಡೆ ತಲೆದಂಡ" ನಿಸ್ವಾರ್ಥ ಸೇವೆ, ಪ್ರಾಮಾಣಿಕ ಬದುಕಿನ, ಚಿತ್ರಣವಾಗಿದ್ದು ಇಂದಿನ ಸರ್ವೋದಯ ಸಮಾಜದ ನಿರ್ಮಾಣದಲ್ಲಿಯೂ ಆದರ್ಶಪ್ರಾಯವಾಗಿ ಉಳಿದಿದೆ. ಭಿಕ್ಷೆ ಬೇಡುವುದನ್ನು ಕಟುವಾಗಿ ಟೀಕಿಸಿದ ಶರಣರು ಇನ್ನೊಬ್ಬರ ಹಂಗಿನಲ್ಲಿ ಬಾಳುವ ಬದುಕನ್ನು ಹಳಿಯುತ್ತಾರೆ.

***ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ***

***ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲಹರಿವುದು***

***ಜಂಗಮವಾದಡೂ ಕಾಯಕದಿಂದಲೇ ವೇಶದ ಪಾಶ ಹರಿವುದು***

***ಇದು ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು.***

ನುಲಿಯ ಚಂದಯ್ಯ ಹೇಳುವರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಹಲವಾರು ವೃತ್ತಿಯವರು ಅಸ್ಪೃಶ್ಯರು, ಕೆಳವರ್ಗದವರು, ಮಹಿಳೆಯರಿದ್ದು, ಇವರಿಗೆಲ್ಲ ಸಮಾನ ಅವಕಾಶವನ್ನು ಕೊಟ್ಟಿದ್ದರು. ಶರಣರಿಗೆ ಕಾಯಕ ಎಂಬುದು ಜೀವನೋಪಾಯಕ್ಕಾಗಿ ಕೈಗೊಂಡ ಉದ್ಯೋಗವಷ್ಟೇ ಆಗಿಲ್ಲದೇ ಅದು ತನಗಾಗಿ ತನ್ನ ಸತಿ–ಸುತರಿಗಾಗಿಯೂ ಇರದೆ, ಸಮಾಜದ ಹಿತಕ್ಕಾಗಿ ಆಗಿತ್ತು. ಸರ್ವ ಸಮಾನತೆಯ ತತ್ವ ಸಾರುತ್ತಿತ್ತು.

ಶರಣರು ದುರಾಸೆಯಿಂದ ಸ್ವಾರ್ಥದಿಂದ ಬಹುದೂರ ಇದ್ದವರು. ಅಂದಂದಿನ ದಿನಕ್ಕೆ ತಮ್ಮ ಜೀವನೋಪಾಯಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ದಾಸೋಹಕ್ಕೆ ವಿನಿಯೋಗಿಸುತ್ತಿದ್ದರು. ಹೆಚ್ಚು ಅಕ್ಕಿಯನ್ನು ತಂದ ಮಾರಯ್ಯನಿಗೆ ಸತಿ ಮಹಾಶರಣೆ ಲಕ್ಕಮ್ಮ ಈಸಕ್ಕಿಯಾಸೆ ನಿಮಗೇಕೆ? ಎಂದು ಪ್ರಶ್ನಿಸಿದ್ದಾಳೆ? "ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತರಿಗೆ ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು" ಎಂದು ನುಡಿದಿದ್ದಾಳೆ.

***"ಮನೆ ನೋಡಾ ಬಡವರು ಮನ ನೋಡಾ ಘನ ಸಿರಿವಂತರು"***

ದಾಸೋಹದ ಮುಖ್ಯ ಉದ್ದೇಶವೇ ಸದೃಢ ಸಮಾಜ ಕಟ್ಟುವುದು ಆದರ್ಶ ಮೌಲ್ಯಗಳನ್ನು ಬಿತ್ತುವುದು, ಹಂಚಿ ತಿನ್ನುವ ಸಂಸ್ಕೃತಿಯನ್ನು ಬೆಳೆಸುವುದು ಆಗಿತ್ತು. ಕಾಯಕ–ದಾಸೋಹದಿಂದ ವ್ಯಕ್ತಿ ಗೌರವ ಮತ್ತು ವೃತ್ತಿ ಗೌರವ ಹೆಚ್ಚಿಸಲಾಯಿತು.

***ಹೊನ್ನಿನೊಳಗೊಂದದೊರೆಯ***
***ಸೀರೆಯೊಳಗೊಂದೆಳೆಯ***

***ಇಂದಿಗೆ, ನಾಳಿಂಗೆ ಬೇಕೆಂದೆನಾದಡೆ***

***ನಿಮ್ಮಾಣೆ ನಿಮ್ಮ ಪ್ರಮಥರಾಣೆ***

ಸತ್ಯ ಶುದ್ಧ ಕಾಯಕದ ಮಹತ್ವ ತಿಳಿಯುತ್ತದೆ. ದೇಹವನ್ನು ದಂಡಿಸದೇ, ಇನ್ನೊಬ್ಬರನ್ನು ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ ಕಂಡಕಂಡವರ ಬೇಡಿ ತಂದು ಜಂಗಮ, ಲಿಂಗಕ್ಕೆ ಮಾಡಿಹೆನೆಂಬಧಂದುಗದ ಮಾಟ ಲಿಂಗಕ್ಕೆ ನೈವೇದ್ಯ ಸಲ್ಲದು.

***ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ***
***ನಾಯಿಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ***
***ನಮ್ಮ ಕೂಡಲ ಶರಣರಿಗಲ್ಲದೆ***
***ಮಾಡುವ ಅರ್ಥ ವ್ಯರ್ಥ ಕಂಡಯ್ಯ***

ಅನ್ಯಾಯ, ಅನೀತಿ, ಭ್ರಷ್ಟತೆಗಳಿಂದ ಗಳಿಸಿದ ಸಂಪತ್ತು ಯಾವುದಕ್ಕೂ ಯೋಗ್ಯವಲ್ಲ ಅದು ಸತ್ಪಾತ್ರಕ್ಕೆ ಸತ್ಕಾರ್ಯಗಳಿಗೆ ಸಲ್ಲುವುದಿಲ್ಲ. ಶ್ರಮವಹಿಸಿ ಬೆವರು ಸುರಿಸಿ, ಕಾಯ ದುಡಿಸಿ, ದುಡಿಮೆಯಲ್ಲಿ ಶುದ್ಧ ಮನವನಿರಿಸಿ ಪ್ರಮಾಣಿಕತೆಯಿಂದ ಬಂದ ದ್ರವ್ಯ ಸಂಪತ್ತು ಮಾತ್ರ ಸತ್ಪಾತ್ರಕ್ಕೆ ಸತ್ಕಾರ್ಯಗಳಿಗೆ ವಿನಿಯೋಗವಾದರೆ ಸಾರ್ಥಕತೆ ಇರುತ್ತದೆ. "ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಕ್ಕರ್ಪಿತವಾಗುತ್ತದೆ ಎನ್ನುವಂತೆ ಬದುಕಿ ತೋರಿದ್ದಾರೆ.

ಶರಣರು ಭಕ್ತಿ, ಕಾಯಕ, ದಾಸೋಹಗಳೆಂಬ ಧಾರ್ಮಿಕ ವಲಯದಲ್ಲಿ ಹೊಸ ಸಂಚಲನ ಮೂಡಿಸಿ ವ್ಯಕ್ತಿಯಲ್ಲಿ ಆತ್ಮಶಕ್ತಿಯ ಅರಿವನ್ನು ಮೂಡಿಸುವ ತತ್ವಗಳಾಗಿವೆ. ಶರಣರ ಇಂಥ ಸರ್ವೋದಯ ತತ್ವಗಳು ಇಡೀ ಮಾನವ ಜನಾಂಗಕ್ಕೆ ಮನುಷ್ಯ ಜೀವನದ ಸಾರ್ಥಕ ಸಂದೇಶಗಳನ್ನು ಸಾರುತ್ತವೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಬರದ. (2022). *ಶರಣರ ದಾಸೋಹ ತತ್ವ–ಹಲವು ಆಯಾಮಗಳು.*
- ತಿಪ್ಪೇರುದ್ರಸ್ವಾಮಿ, ಎಚ್. (2019). *ಶರಣರ ಅನುಭಾವ ಸಾಹಿತ್ಯ.* ಡಿ.ವಿ.ಕೆ ಮೂರ್ತಿ.